

'ಮಾನ್ಸೂನ್ ರಾಗ' ಚಿತ್ರದಲ್ಲಿ ರಚಿತಾ ರಾಮ್ ಮತ್ತು ಧನಂಜಯ್

ಇತ್ತೀಚೆಗಷ್ಟೆ, ರಚಿತಾ ರಾಮ್ ಮತ್ತು ಧನಂಜಯ್ ನಾಯಕ ನಾಯಕಿಯಾಗಿ ನಟಿಸಿರುವ 'ಮಾನ್ಸೂನ್ ರಾಗ' ಸಿನಿಮಾದ ಸುಂದರ ಟೀಸರ್ ಬಿಡುಗಡೆಯಾಗಿದೆ. ಹಿಂದೆ 'ಪುಷ್ಪಕ ವಿಮಾನ' ಸಿನಿಮಾ ನಿರ್ದೇಶಿಸಿದ್ದ ಎಸ್. ರವೀಂದ್ರನಾಥ್ ಈ ಚಿತ್ರಕ್ಕೂ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಈ ಚಿತ್ರದಲ್ಲಿ ರಚಿತಾ, ಲೈಂಗಿಕ ಕಾರ್ಯಕರ್ತೆಯಾಗಿ ಕಾಣಿಸಿಕೊಂಡಿರುವ ಸೂಚನೆ ಟೀಸರ್‌ನಲ್ಲಿಯೇ ಕಾಣಿಸುತ್ತದೆ. ಈ ಚಿತ್ರದ ಮುಕ್ಕಾಲು ಭಾಗದಷ್ಟು ಚಿತ್ರೀಕರಣ ಈಗಾಗಲೇ ಮುಗಿದಿದೆಯಂತೆ.

ಸಂಕಲನಕಾರರಾಗಿ ಕೆಲಸ ಮಾಡುತ್ತಿದ್ದ ನವೀನ್ ಶೆಟ್ಟಿ ಮೊದಲಬಾರಿಗೆ ಆ್ಯಕ್ಷನ್ ಕಟ್ ಹೇಳುತ್ತಿರುವ 'ಶಬರಿ ಸರ್ಚಿಂಗ್ ಫಾರ್ ರಾವಣ' ಸಿನಿಮಾದಲ್ಲಿಯೂ ರಚಿತಾ ರಾಮ್ ನಾಯಕಿಯಾಗಿ ನಟಿಸುತ್ತಿದ್ದಾರೆ. ಮಹಿಳಾಪ್ರಧಾನವಾದ ಈ ಚಿತ್ರ ಸೇಡಿನ ಕಥೆಯನ್ನು ಒಳಗೊಂಡಿದೆಯಂತೆ. ಮೈಸೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಮುಂದಿನ ಚಿತ್ರೀಕರಣಕ್ಕಾಗಿ ಯೋಜನೆ ರೂಪಿಸುತ್ತಿದೆ.

ಇದರ ಜೊತೆಗೆ 'ರಚ್ಚೂ ಐ ಲವ್ ಯೂ' ಎಂಬ ಪಕ್ಕಾ ಕಮರ್ಷಿಯಲ್ ಸಿನಿಮಾದಲ್ಲಿಯೂ ರಚಿತಾ, ಅಜಯ್ ರಾವ್ ಜೊತೆಗೆ ನಟಿಸುತ್ತಿದ್ದಾರೆ. ಈ ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿಯೇ ಇತ್ತೀಚೆಗೆ ವಿದ್ಯುತ್ ದುರ್ಘಟನೆ ಸಂಭವಿಸಿ, ಒಬ್ಬ ಕಲಾವಿದ ಬಲಿಯಾಗಿದ್ದರು. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ರಚಿತಾ ಸೋಷಿಯಲ್ ಮೀಡಿಯಾಗಳಲ್ಲಿ ತುಂಬ ಬೇಜಾರಿನಿಂದ, 'ಘಟನೆ ನಡೆದಾಗ ನಾನು ಆ ಜಾಗದಲ್ಲಿ ಇರಲಿಲ್ಲ. ನಮ್ಮ ಚಿತ್ರತಂಡದ ಕಲಾವಿದನೊಬ್ಬ ತೀರಿಕೊಂಡಿದ್ದು ಬೇಜಾರು ತಂದಿದೆ' ಎಂದು ಬರೆದುಕೊಂಡಿದ್ದರು. ಹಾಗೆಯೇ ತಮ್ಮ ಬಗ್ಗೆ ನಡೆಯುತ್ತಿರುವ ಅಪಪ್ರಚಾರದ ಕುರಿತೂ ಬೇಸರದಿಂದ ಬರೆದಿದ್ದರು.

ಆ ದುರ್ಘಟನೆಯನ್ನು ಪಕ್ಕಕ್ಕಿಟ್ಟು ನೋಡುವುದಾದರೆ, ಲಾಕ್‌ಡೌನ್ ನಂತರ ರಚಿತಾ ರಾಮ್ ವೃತ್ತಿಬದುಕು ಮಹತ್ವದ ತಿರುವೊಂದರಲ್ಲಿ ಹೊರಳಿಕೊಂಡಿರುವ ಲಕ್ಷಣವಂತೂ ಕಾಣಿಸುತ್ತಿದೆ. ಸ್ಟಾರ್ ಸಿನಿಮಾಗಳಲ್ಲಿ ಹೀರೊ ಜೊತೆಗಿನ ರೊಮಾನ್ಸ್ ಮಾಡುವ ಹುಡುಗಿಯ ಆಚೆಗೂ ಅವರಲ್ಲಿ ಪ್ರತಿಭೆಯಿದೆ, ಸವಾಲಿನ ಪಾತ್ರಗಳನ್ನು ನಿರ್ವಹಿಸಬಲ್ಲ ಮನಸ್ಸಿಗೆ ಎಂಬುದನ್ನು ಈ ಚಿತ್ರಗಳು ಹೇಳುತ್ತಿವೆ. ■

# ರಚನಾತ್ಮಕ 'ಲವ್ 360'



ಪ್ರೇಮಕಥೆಗಳ ನೇಕಾರ ಶಶಾಂಕ್ ಅವರ ಹೊಸ ಸಿನಿಮಾ ಹೆಸರು 'ಲವ್ 360'. ಪ್ರೇಮದ ಎಲ್ಲ ಆಯಾಮಗಳನ್ನೂ ಶೋಧಿಸಲು ಹೊರಟಿರುವ ಈ ಚಿತ್ರಕ್ಕೆ ಹೊಸಬರನ್ನೇ ನಾಯಕ–ನಾಯಕಿಯಾಗಿ ಆರಿಸುತ್ತೇನೆ ಎಂದು ಶಶಾಂಕ್ ಹೇಳಿದ್ದರು.

ಪ್ರವೀಣ್ ಎಂಬ ಹೊಸಮುಖವನ್ನು ನಾಯಕನಾಗಿ ಆಯ್ಕೆ ಮಾಡಿಕೊಳ್ಳುವುದರ ಮೂಲಕ ತಮ್ಮ ಮಾತನ್ನು ಉಳಿಸಿಕೊಂಡಿದ್ದರು. ಈಗ ಚಿತ್ರದ ನಾಯಕಿಯ ಹೆಸರನ್ನು ಚಿತ್ರತಂಡ ಬಿಡುಗಡೆ ಮಾಡಿದೆ. ನಾಯಕಿ ಚಿತ್ರರಂಗಕ್ಕೆ ಮೊದಲ ಪರಿಚಯ ಏನಲ್ಲವಾದರೂ ಹೊಸ ಪ್ರತಿಭೆಯೇ. ಡಾರ್ಲಿಂಗ್ ಕೃಷ್ಣ ಅವರ ನಿರ್ದೇಶನ–ನಟನೆಯ 'ಲವ್ ಮಾಕ್ಟೇಲ್' ಸಿನಿಮಾ ಮೂಲಕ ಚಿತ್ರರಂಗಕ್ಕೆ ಪರಿಚಿತರಾಗಿದ್ದ ರಚನಾ ಇಂದರ್ 'ಲವ್ 360'ಗೆ ನಾಯಕಿಯಾಗಿ ಆಯ್ಕೆಯಾಗಿದ್ದಾರೆ.

'ಲವ್ ಮಾಕ್ಟೇಲ್' ಸಿನಿಮಾದ ಗೆಲುವು ರಚನಾಗೆ ಚಂದನವನದಲ್ಲಿ ಒಳ್ಳೆಯ ಅವಕಾಶಗಳನ್ನು ತಂದುಕೊಡುತ್ತಿದೆ. ಈಗಾಗಲೇ, 'ತ್ರಿಬಲ್ ರೈಡಿಂಗ್' ಸಿನಿಮಾದಲ್ಲಿ ಗಣೇಶ್ ಜೊತೆ, 'ಹರಿಕಥೆ ಅಲ್ಲ ಗಿರಿಕಥೆ' ಸಿನಿಮಾದಲ್ಲಿ ರಿಷಭ್ ಶೆಟ್ಟಿ ಜೊತೆಗೆ ತೆರೆಯನ್ನು ಹಂಚಿಕೊಳ್ಳುತ್ತಿದ್ದಾರೆ. ಈಗ ಜನಪ್ರಿಯ ನಿರ್ದೇಶಕ ಶಶಾಂಕ್ ಅವರ ನಿರ್ದೇಶನದ ಸಿನಿಮಾದಲ್ಲಿ ನಟಿಸಲು ಅವಕಾಶ ಸಿಕ್ಕಿರುವುದು ಅವರಿಗೆ ಸಹಜವಾಗಿಯೇ ಖುಷಿ ತಂದಿದೆ. 'ಶಶಾಂಕ್ ಅವರು ತಮ್ಮ ಸಿನಿಮಾಗಳಲ್ಲಿ ಯಾವಾಗಲೂ ನಾಯಕಿಗೆ ಮಹತ್ವ ಕೊಡುತ್ತಾರೆ. ಹಾಗಾಗಿ ಅವರ ಸಿನಿಮಾದಲ್ಲಿ ನಾಯಕಿಯಾಗಿ ನಟಿಸುತ್ತಿರುವುದು ತುಂಬ ಖುಷಿಯ ಸಂಗತಿ' ಎಂದಿರುವ ರಚನಾ, ಹೊಸ ಚಿತ್ರದ ಬಗ್ಗೆ, ಪಾತ್ರದ ಬಗ್ಗೆ ಯಾವ ಸುಳಿವನ್ನೂ ನೀಡಿಲ್ಲ.

ಆಡಿಷನ್ ಮೂಲಕವೇ ಈ ಸಿನಿಮಾಕ್ಕೆ ಆಯ್ಕೆಯಾಗಿದ್ದಾರೆ ರಚನಾ. ಒಂದೇ ದಿನದಲ್ಲಿ ಸ್ಕ್ರೀನ್ ಟೆಸ್ಟ್ ಮಾಡಿ, ಡೈಲಾಗ್ ಹೇಳಿಸಿ, ಪಾತ್ರದ ಬಗ್ಗೆಯೂ ವಿವರಿಸಿ ಓಕೆ ಮಾಡಿಬಿಟ್ಟರಂತೆ ಶಶಾಂಕ್. ಈ ಪಾತ್ರವು ಅವರಿಗೆ ಸವಾಲಿನದು ಅನಿಸಿದೆ. ಸಾಮಾನ್ಯವಾಗಿ ಎಲ್ಲ ಪಾತ್ರಗಳಿಗೂ ರೆಫರೆನ್ಸ್‌ಗಳು ಸಿಗುತ್ತವೆ. ಆದರೆ ಇದು ರೆಫರೆನ್ಸ್ ಇಲ್ಲದ ಪಾತ್ರ. ಅದೇ ರಚನಾಗೆ ಸವಾಲನ್ನು ಒಡ್ಡುತ್ತಿದೆಯಂತೆ. ಹಾಗಾಗಿ ಚಿತ್ರೀಕರಣಕ್ಕೂ ಮುನ್ನ ತಾಲೀಮು ಮಾಡಿ ಸಜ್ಜುಗೊಳ್ಳಲು ಅವರು ನಿರ್ಧರಿಸಿದ್ದಾರೆ. ಹೊಸಮುಖಗಳನ್ನೇ ಇಟ್ಟುಕೊಂಡು ಪ್ರೇಮಕಥೆ ಕಟ್ಟುತ್ತಿರುವ ಶಶಾಂಕ್ ಅವರ ಈ ಸಿನಿಮಾ ಗೆದ್ದರೆ ರಚನಾ ವೃತ್ತಿಜೀವನವಂತೂ ಇನ್ನೊಂದು ಮೆಟ್ಟಿಲು ಮೇಲಕ್ಕೆ ಏರುತ್ತದೆ. ■

ರಚನಾ ಇಂದರ್